### ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಬಂಡೀ ಹಾಡು



ಶ್ರೀನಿವಾಸ ಪರಬ್ರಹ್ಮನು ಸಾರ್ವಭೌಮತ್ವ, ಸರ್ವತಂತ್ರ ಸ್ವತಂತ್ರತೆ, ದಯೆ, ಭಕ್ತ ಪರಾಧೀನತೆ, ಸಹಿಷ್ಣುತೆ ಇಂತಹಾ ಅನೇಕ ಕಲ್ಯಾಣ ಗುಣಗಳ ಸಾಕ್ಷಾತ್ಕಾರ.

ಕಲೌ ವೇಂಕಟ ನಾಯಕಃ

**ಕೃತೇತು ನಾರಸಿಂಹೋ ತ್ರೇತಯಾ ರಘುನಂದನಃ। ದ್ವಾಪರೇ ವಾಸುದೇವಶ್ಚ ಕಲೌ ಶ್ರೀ ವೇಂಕಟನಾಯಕಃ ॥**

"ವೇಂ" ಅಂದರೆ ಪಾಪ, "ಕಟ" ಎಂದರೆ ನಿರ್ಮೂಲನ ಮಾಡುವುದು. ಕಲಿಯುಗದ ದುಷ್ಪ್ರಭಾವದಿಂದ ನಮ್ಮನ್ನು ರಕ್ಷಿಸಲು ಆ ಪರಬ್ರಹ್ಮ ಪರಮಾತ್ಮನು ಶ್ರೀ ವೇಂಕಟೇಶ್ವರ ಸ್ವಾಮಿಯಾಗಿ ಅವತರಿಸಿದ್ದಾನೆ. ಕಲಿಯುಗದಲ್ಲಿ ವೇಂಕಟೇಶ್ವರ ಸ್ವಾಮಿಯು ಖಡ್ಗ ನಂದಕವನ್ನು ಪಿಡಿದು ದುಷ್ಟ ಸಂಹಾರ ಮಾಡಲಿಲ್ಲ. ಆದರೆ ಈ ನಂದಕ ಖಡ್ಗ ಅನ್ನಮಾಚಾರ್ಯರಾಗಿ ಆವಿರ್ಭವಿಸಿ ತಮ್ಮ ಕೃತಿಗಳಿಂದ ನಿರಂತರ ಸ್ವಾಮಿಯನ್ನು ಸೇವಿಸಿ, ಭಕ್ತಿ ಸಾಹಿತ್ಯದಲ್ಲಿರುವ ವೈಶಿಷ್ಟ್ಯವನ್ನೂ, ಅವುಗಳಲ್ಲಡಗಿದ ಭಗವದಾರಾಧನಾ ಪರಿಯನ್ನು ಪ್ರಚಾರ ಮಾಡಿತು. ಗಂಟೆಯು ವೇದಾಂತ ದೇಶಿಕುಲದವರಾಗಿ ಜನ್ಮವೆತ್ತಿತು. ಶ್ರೀಶೈಲ ಪೂರ್ಣ ಎಂದು ಕರೆಯಲ್ಪಟ್ಟ ತಿರುಮಲನಂಬಿ, ತರಿಗೊಂಡ ವೇಂಗಮಾಂಬ, ಅನಂತಾಳ್ವಾರ್, ಹಾಥೀರಾಮ್ ಬಾವಾಜೀ ಮುಂತಾದ ಭಕ್ತರು ತಿರುಮಲದಲ್ಲಿ ಶ್ರೀನಿವಾಸನ ಜೊತೆ ಮಾತನಾಡಿ ಅವರ ಸಂಗಡ ಆನಂದವನ್ನು ಆಸ್ವಾದಿಸಿದ ಮಹಾಪುರುಷರು.

ಲೋಕದಲ್ಲಿ ಏನೂ ಮಾಡದಿದ್ದರೂ, ಕಿಂಚಿತ್ ಮಾಡಿದರೂ, ನಾನು ಮಾಡಿದೆ, ಇಷ್ಟು ಮಾಡಿದೆ, ಅಷ್ಟು ಮಾಡಿದೆ ಎಂದು ಹೇಳಿಕೊಳ್ಳುವವರೇ ಬಹಳ. ಇದು ಮಾನವನ ಸಹಜ ಗುಣವೂ ಹೌದು. **"ನಾಹಂ ಕರ್ತಾ ಹರಿಃ ಕರ್ತಾ"** ಎಂಬ ನುಡಿಯನ್ನು ಕಿಂಚಿತ್ತಾದರೂ ಅನುಭವಿಸಿ, ಅನುಷ್ಠಾನ ಮಾಡಿಕೊಳ್ಳುವಂತಾಗಲಿ ಎಂದು ಆ ದಯಾಮಯನಾದ ಶ್ರೀನಿವಾಸನಲ್ಲಿ ಒಂದು ಸವಿನಯ ಪ್ರಾರ್ಥನೆ.

**ಈಗ ಬಂಡೀ ಹಾಡು.**

ಈ ಪಾರಾಯಣೆ ಮಾಡಿದವರಿಗೆ ಸಕಲ ಇಷ್ಟಾರ್ಥಗಳೂ ನೆರವೇರುತ್ತದೆಂಬ ಹಿರಿಯರ ನುಡಿಯಂತೆ ನಾವೂ ಭಕ್ತಿಭಾವದಿಂದ ಈ ಪ್ರಾರ್ಥನೆ ಮಾಡೋಣ.

ಶ್ರೀಮದ್ವೇಂಕಟಗಿರಿಯಲಿ ಸ್ವಾಮಿಯು ನೀನಾಗಿ ನೆಲೆಸಿ।
ಸುಜನರಿಗೆ ಕಾಮಿತ ಫಲಗಳ ಕೊಡುವನೇ।
ಪ್ರೇಮದಿ ವರವಿತ್ತು ಕಾಯೋ ವರ ನರಸಿಂಹಾ ॥

**ವಚನ:** ಈ ಪ್ರಕಾರವಾಗಿ ಭಕ್ತವತ್ಸಲನಾದ ಭಗವಂತನ ಸ್ತುತಿಸಿ ಆತನ ಮಹಿಮೆಗಳನ್ನು ಪೊಗಳುವದದೆಂತೇನೇ ॥

**ಕಂದ:**

ಧರೆಯೊಳು ಭಾಗಾನಗರದ ತರುಣಿಗೆ ಬಾಲಕನ ವರವಾ ಸಂತೋಷದೊಳಿತ್ತಾ ಚರಿತೆಯ ಪೇಳ್ವರು ಜನರೂ । ಹರುಷದಿ ಮನವಿಟ್ಟು ಹರಿಕಥೆ ಕೇಳೀ ॥

**ರಾಗ:**

ಭಾಗಾನಗರದ ಬಾಲಕಿಯೊಬ್ಬಳು ಬಾಲಕನನು ತಾ ಬಯಸುತಲೀ।
ಭಾಗೀರಥಿಪ್ರಿಯ ಭಾಗವತಪ್ರಿಯ ಯೋಗಿಗಳರಸನ ನೆನೆಯುತಲೀ।
ಆಪದ್ಬಾಂದವ ಅನಾಥರಕ್ಷಕ ಆಪದೋದ್ಧಾರಕ ಹರಿಯೆಂದೂ।
ಕಾಪಾಡಲಿ ಬೇಕು ಕೃಪೆಮಾಡೆನ್ನನು ಶ್ರೀಪತಿ ನೀನೇ ಗತಿಯೆಂದೂ ॥
ನಂಬಿದೆ ನಾ ನಿನ್ನ ಶಂಭುಸುತನೆ ಕಂಬದಿಂದುಸಿ ನೀ ಕಾಯ್ದೆ ಪ್ರಹ್ಲಾದನನ್ನು।
ಕರಿರಾಜ ಕಷ್ಟದಿ ಮೊರೆಯಿಡಲು ಕೇಳಿ ಘನದಿಂದ ಬಂದು ಕಾಯ್ದೆ ಭಕ್ತವತ್ಸಲನೆಂದೂ।
ದುರುಳ ದುಶ್ಯಾಸನನೂ ತರಳೆ ಶರಗನೆಳೆ ಶರಗ ಶತಕೋಟಿ ಮಾಡಿದ ಶರಣರುದ್ಧಾರನೆಂದೂ।
ದಾಸರಿಗೊದಗಿದ ಶ್ರೀ ಶ್ರೀಶನೇ ವಾಸುಕಿ ಶಯನ ಶ್ರೀ ನರಸಿಂಹ ಮೂರುತಿ ನಂಬಿದೆ ನಾನಿನ್ನಾ।

**ರಾಗ:**

ಶ್ರೀನಿವಾಸನೇ ಭಕ್ತರ ಬಂಧೂ। ನಂಬಿದೆ ರಕ್ಷಿಸು ಎಂದೂ।
ಮಾನುನಿ ದ್ರೌಪದಿ ಮಾನವ ಕಾಯ್ದನೆ। ಹೀನರಮನ ಗರ್ವವನಳಿದನೆ।
ಸಾನುರಾಗದಿ ಪ್ರಹ್ಲಾದನ ಕಾಯ್ದನೆ। ಧ್ಯಾನಿಸಿದಾ ಗಜರಾಜನ ಪೊರೆದನೆ।
ಮುನಿಸಿಲಿ ಮಕರಗೆ ಮುಕ್ತಿಯನಿತ್ತನೆ। ಹಿರಣ್ಯಕಶುಪಿನ ಸೊಕ್ಕಡಗಿಸಿದನೆ।
ಕರ್ಣನ ಕಂಠವ ಕತ್ತರಿಸಿಟ್ಟನೆ। ಅನ್ಯಾಯ ಕುರುಪತಿ ಮಡುಹಿದನೆ।
ಧ್ಯಾನಿಸೆ ಪಾಂಡವರೈವರ ಕಾಯ್ದನೆ। ಚನ್ನದಹಲ್ಯೆಯ ಶರಣನುದ್ಧಾರನೆ।
ನಿನ್ನ ನಂಬಿದೆ ನೀರಜನಾಭನೆ। ಇನ್ನು ನಿನ್ಹೊರದು ಕಾಯ್ವರ ಕಣ್ಣಲಿ ಕಾಣೆನು ಪನ್ನಗ ಶಯನಾ ॥
ಕಷ್ಟವ ಬಿಡಿಸೋ ಕರುಣಾಂಬುಧಿಯೇ। ಶಿಷ್ಟರಿಗಿಷ್ಟಾರ್ಥವ ಈವ ದೊರೆಯೇ।
ಪುಟ್ಟಿದ ಮೂವತ್ತೊರುಷದ ಸ್ತ್ರೀಯೇ। ಗಟ್ಟಿಮಂಚದಲಿ ಮಲಗಿ ನಾನರಿಯೆ।
ಪುಟ್ಟ ಮಕ್ಕಳಿಲ್ಲದ ಬ್ಯಾಸರಿಯೇ। ಕಟ್ಟಿದ ತೊಟ್ಲಿಟ್ಟು ಕಣ್ಗೊಳಗರಿಯೆ।

ಅಷ್ಟುಮಂದಿ ಬಂಜೆ ಎಂಬೋರೋ ಹರಿಯೇ। ಎಷ್ಟು ನೋಡಿದರು ಇಷ್ಟೇ ಹರಿಯೇ।

ಸೃಷ್ಟಿಕರ್ತ ಇಷ್ಟಾರ್ಥ ಭಕ್ತರಿಗೆ ಕೊಟ್ಟು ರಕ್ಷಿಸುವೋ ಪಟ್ಟದ ದೊರೆಯೇ।

ಪರಮ ಪುರುಷ ಪರಂಜ್ಯೋತಿ ಸ್ವರೂಪ। ಪರಾಪರೋಸ್ತುತೆ ಪಾವನ ಮೂರುತಿ।

ಪರಶುರಾಮ ಹರಿ ಪನ್ನಗಶಾಯಿ। ಹರಿ ಸರ್ವೋತ್ತಮ ಹರಿದಾಸರ ದೊರೆಯೇ।

ಹರುಷದಿ ಎನ್ನನು ಹರಸಿ ಪಾಲಿಸೋ। ಸಿರಿಪತಿ ಶ್ರೀ ಶ್ರೀನಿವಾಸನೆ।

ನಿನ್ನಯ ಮೊರೆಯ ಹೊಕ್ಕೆನೋ ಎನ್ಮೊರೆಯ ಲಾಲಿಸೋ। ಜರಿಯ ಬೇಡವೆಲೋ ಜಾನಕೀರಮಣ।

ಮರೆಯದೆ ನಿನ್ನಯ ಮನದೊಳು ಕರುಣ। ಹರುಷದಿ ನಂಬಿದೆ ಹರ ನಿನ್ನ ಚರಣ।

ಸುರವರ ಗಿರಿಧರ ನರಹರಿ ಮೂರುತಿ। ಕರುಣಿಸಿ ಕಾಯೆನ್ನ ಕಂಜದಳಾಕ್ಷ ॥ ಶ್ರೀನಿವಾಸನೆ ॥

**ಕಂದ:**

ಶೇಷಗಿರೀಶನೆ ನಿನ್ನ ವಾಸಿಯ ಪೊಗಳುವುದಾದಿಶೇಷನಿಗೊಳವೇ। ದಾಸನ ಪೋಷಿಸಿ ಶ್ರೀಶನೆ ಕೂಸೆನಗಿತ್ತು ಕಾಯೋ ಪೆಂಗಳಪ್ರೇಮ। ಪುಂಡರೀಕಾಕ್ಷನೇ ಕರುಣಿಸಿ ಗಂಡುಸು ಮಗನಿತ್ತರೆ ನಗುತ ಆ ಕಂದನ ತಂದು। ಅಂಡಜವಾಹನೇ ನಿನ್ನ ಬಂಡಿಯ ಕೆಳಗೊಪ್ಪಿಸುವೆನು ನಾನಾ ಬಾಲಕನ ತಂದೂ ॥

**ರಾಗ:**

ಪುತ್ರರಿಲ್ಲದ ಜನರಿಗೆ ಲೋಕವು ಪುನ್ನಾಮನರಕ ಎನ್ನುವರೂ।

ಪುತ್ರರಿಲ್ಲದ ಅಪವಿತ್ರಳು ಇವಳೆಂದು ಭಿಕ್ಷೆಗೆ ಬಾರರು ಮನೆಗ್ಯಾರೂ।

ಮಾನವರಾಡಿದ ಹೀನಮಾತುಗಳ ಕೇಳಲಾರೆನೋ ಹರಿಯೇ।

ಮಾನುನಿ ಕೂಸನು ಪಡೆದಿಹಳೆನ್ನುವ ಮಾತು ಒಂದೇ ಸಾಕೆಲೋ ಹರಿಯೇ।

ಕಷ್ಟವ ಪಡಲಾರೆ ಎಷ್ಟುಮಾತ್ರವೂ। ಕೊಟ್ಟು ರಕ್ಷಿಸೆನ್ನ ಸೃಷ್ಟೀಶಾ।

ಇಷ್ಟು ದಿನಾ ನಾ ಮಾಡಿದ ಪ್ರಾರ್ಥನೆ ಎಷ್ಟು ಹೇಳಲೋಚಲವಾಸಾ ॥

**ವಚನ:**

ಇಂತೆಂದು ಹರಕೆ ಮಾಡಲಾ ಸತಿ। ಗಂಡ ಅತ್ತೆ ಮಾವಂದಿರು ಪರಸ್ಪರ ಪ್ರಾರ್ಥನೆ ಗೊಂಡರೆಂತೇನೇ।

**ರಾಗ:**

ಸತಿ ಪತಿ ಮಾಡಿದಕ್ಷಿತಿಯೊಳು ಹರಕೆಯ ರತಿಪತಿ ಪಿತನನು ಸ್ತುತಿಸುತಲಿ।

ಸುತನೀತ್ತರೆ ಸುರಮುನಿ ಪ್ರಿಯಕೆ ಪ್ರತಿಮೆಯ ಮಾಳ್ವೆ ಸುವರ್ಣದಲಿ।

ಅತ್ತೆಯು ಮಾಡಿದಳ್ ಹರಕೆಯ ವೇಗದಿ ಇತ್ತರೆ ಕೂಸನು ಸೊಸೆಗೆನುತ।

ಚಿತ್ತಜಪಿತನಿಗೆ ಬಂಗಾರದ ತೊಟ್ಲಿಟ್ಟು ಬರುವೆ ತಾನೆಂದೆನುತಾ।

ಮಾವನು ಮಗನಿಗೆ ಮಗನಾದರೆ ತಾ ದೇವ ನರಸಿಂಹನ ನೆನೆಯುತ್ತಾ।

ಸೇವೆಗೆ ಬರುವೆ ನಾ ಶ್ರೀ ಶ್ರೀನಿವಾಸನೆ ದಾರಣೆ ಪಾರಣೆ ಮಾಡುತ್ತಾ ।। ಸತಿ ಪತಿ ॥

**ವಚನ:**

ಇಂತೆಂದು ಹರಕೆ ಮಾಡಿ ಹರುಷದಿಂದಿರುತಿರಲು ಹರಿ ಒಂದು ವರವ ದಯಪಾಲಿಸಲು। ಸತಿ ಗರ್ಭವ ಧರಿಸಿದಳದೆಂತೆನೇ।

**ರಾಗ:**

ಭಾಮಿನಿ ಗರ್ಭವನು ಧರಿಸಿದಳ್ ಸ್ವಾಮಿಯ ಕೃಪೆಯಿಂದಾ।

ರಾಮನ ಕರುಣವು ರಮಣಿಗಾಯಿತು ಎಂದು ಭಾಮಿನಿಯರು ಕೊಂಡಾಡುತಲಿರುವಾಗ।।

ಒಂದು ತಿಂಗಳು ಕಳೆಯೆ ರಮಣಿ ತಾನಿಂದುಮುಖಿ ಎನಿಸಿದಳು।

ಮುಂದಕೆ ದಿನ ನೆಡೆ ಬಯಕೆಯು ತೋರಲು ಮಂದಿರದಾ ಜನ ಆನಂದ ಭರಿತರಾಗೆ॥

ಮೂರು ಮಾಸಗಳಾಗೆ ಊರೊಳಗೆ ಯಾರು ಅರಿಯದಂತೆ।

ನಾರಿಗೆ ಮಲ್ಲಿಗೆ ಮೊಗ್ಗು ಮುಡಿಸಿದರು ವಾರಿಜನಾಭಗೆ ವಂದನೆ ಗೈಯ್ಯುತ್ತಾ॥

ಮಾಸವೈದರಲಿ ಸ್ತನಕೊನೆ ಈಶಕಂಠವಾಗೆ।

ಸಾಸಿರ ಬ್ರಾಹ್ಮಣ ಸಂತರ್ಪಣೆ ಮಾಡಿ ಸತಿಗೆ ಸಂಭ್ರಮದಿಂದ ಬಳೆಯ ತೊಡಿಸಿದರು॥

ಆರುಮಾಸವು ಬರಲು ಅಂಗನೆ ಆನೆಯು ತಾನಾದಳು।

ನಾರದ ವರದನು ನಮಗೆ ಒಲಿದನೆಂದು ನಾರಿಗೆ ಸೀಮಂತವ ಮಾಡಿದರು॥

ತುಂಬಿತು ನವಮಾಸ ತರುಣಿಗೆ ಇಂಬಾಯಿತು ಮಧ್ಯದೇಶ।

ಕಂಬದಿಂದೊಡೆದ ನರಸಿಂಹನ ದಯೆಯಿಂದ ಅಂಬುಜಾಕ್ಷಿಗೆ ಪ್ರಸವ ವೇದನೆ ಕಂಡಿತು॥

**ರಾಗ:**

ಅಮ್ಮ ನಾ ತಾಳಲಾರೆ ಕೇಳಮ್ಮ ಸುಮ್ಮನೆ ಇರಲಾರೆನೆ।

ಬ್ರಹ್ಮನು ಪಣೆಯೊಳು ಏನೇನು ಬರೆದನೋ ಮೈ ಜುಂ ಜುಂ ಎನ್ನುತಿದೆ ಕೇಳಮ್ಮ॥

ಗಡ ಗಡ ನಡುಗುತಲಿದೆ ತೊಡೆಯೆರಡು ನಡುವೆ ಜಡೆಯ ತಮ್ಮಯ।

ಕಡುಬೇಗದಲಿ ಪೋಗಿ ಸೂಲಗಿತ್ತಿಯ ಕರೆತಾರೆ ಕಾಂತಗೆ ಪೇಳಮ್ಮ ಈ ಕಷ್ಟವ॥

ಜಾನು ಜಂಘಗಳೆನಗೆ ಜಾರುತಲಿದೆ ಏನು ಮಾಡಲೇ ಅಮ್ಮಯ್ಯ।

ನರಸಿಂಹ ಮೂರುತಿ ಒಲಿದು ವರವ ಕೊಟ್ಟ ವರಿಸಲಾರೇ ನೀ ಕೇಳಮ್ಮಯ್ಯಾ॥ ಅಮ್ಮ ನಾ ॥

**ಕಂದ:**

ಇಂತತಿ ಬೇನೆಗಳಾಗುತ್ತಿರೆ ಕಾಂತನು ಭೂಸುರರ ಕರೆಸಿ ಮಂತ್ರವ ಜಪಿಸಲು। ಇಂತತಿ ವಿಪ್ರರೆಲ್ಲರೂ ಮಂತ್ರಾಕ್ಷತೆ ತಳಿದು ಮಾಡಲಾಶೀರ್ವಾದವನೂ। ಶುಭವಾರವು ಶುಭಯೋಗವು ಶುಭತಾರೆಯು ಶುಭಲಗ್ನದಿ ಸುರತಿ ತಾ ಸುಪುತ್ರನನ್ನು ಪಡೆದಳು॥

**ರಾಗ:**

ಕಾವು ಕಾವೆಂದೆನುತಾ ಕೂಸು ಪುಟ್ಟಿತು ದೇವರ ನೆನೆಯುತ್ತಾ।

ಆವಾಗ ಜೋಯಿಸರು ದೇವನಿತ್ತ ಕೂಸಿಗೆ ಭಾವಿಸಿ ನೋಡೆ ಗ್ರಹ ಪಂಚ ಕೊಂಚವೆಂದು॥

**ಕಂದ:**

ಪುತ್ತಿದ ಕೂಸಿಗೆ ಬೇಗ ಪೊಕ್ಕಳ ಬಳ್ಳಿ ಕತ್ತರಿಸಿ ಪುತ್ರವತಿಯರು ತಟ್ಟನೆ ಬಿಸಿನೀರೆರೆದು ತಟ್ಟೆಯೊಳ್ ಆರತಿ ಮಾಡಿ ಸ್ತುತಿಯಿಂದ ಸುರಿದರು। ಬಾಲನ ಎತ್ತಿ ತಂದು ಬಾಣಂತಿ ಕೈಲಿ ಬೇಗದಿಂದಿತ್ತರಂದೂ। ನೀಲವೇಣೀ ಕೇಳೂ ನೀಲಿವಸ್ತ್ರವ ತಂದು ಹಳೆಮರದೊಳಗೆ ಹಾಸೀ ಮಲಗಿಸು ಎಂದೂ॥

ಪುತ್ರನ ಪಡೆದಾ ಪುರುಷನು ಮಿತ್ರ ಜನಗಳಿಂದ ಕೂಡಿ ನದಿಯ ಸ್ನಾನವ ಮಾಡಿ ವಸ್ತ್ರವ ಹೊಸದಾಗುಟ್ಟರು। ಪುತ್ರಗೆ ಪುಣ್ಯಾಹ ಜಾತಕರ್ಮವ ಮಾಡಿಸಿರೆಂದರು। ಭೂಸುರರೆಲ್ಲರು ಕೂಡಿ ಪುಣ್ಯಾಹ ಜಾತಕರ್ಮವ ಮಾಡಿ ಸಾವಿರ ವರಹ ದೇಶಾವಾರ ತಕೊಂಡು ಜಗದೀಶ ನರಸಿಂಹನ ಕೂಸೆಂದೂ॥

**ರಾಗ:**

ಜಾತಕರ್ಮವ ಮಾಡಿ ಮನೆಯೊಳಗನುದಿನ ವಾರಾಂತರ್ಗತ ಸ್ವಾಮಿಗೆ।
ಪ್ರೀತಿಲಿ ಸಹಸ್ರನಾಮಾರ್ಚನೆ ಆಚರಿಸಿ ನಂದಾದೀಪಗಳಿರಿಸೀ।
ಪಂಚಭಕ್ಷ್ಯಾನ್ನವ ಪ್ರಾಣೇಶಗರ್ಪಿಸಿ ಬ್ರಾಹ್ಮಣರನ್ನು ಪೂಜಿಸಿ।
ಹಿಂಚಯದರು ಉಂಡು ಹಿರಿಯರ ಕೈಯಿಂದ ಹರಿಕಥೆಗಳ ಕೇಳುತಾ।
ಆರತಕ್ಷತೆಯನ್ನು ಹರಸಿ ಕೂಸಿಗೆ ನಿತ್ಯ ವರಸಾಗಿ ಮಾಡುತಿರೇ।
ನಾರಿ ನಂದನ ಪೆತ್ತು ನಾಲ್ಕಾರು ದಿನವಾಗೆ ನರಸಿಂಹನ ನೆನೆಯುತ್ತಾ॥

**ಕಂದ:**

ಹನ್ನೊಂದನೇ ದಿನವೂ ಕೂಸಿಗೂ ಪೆತ್ತವಳಿಗೂ ಸಹಿತ ಪರಮ ಸಂಭ್ರಮದಿಂದ ಹಿತ್ತಲವಳಗೆರೆದು ಕರೆತಂದರು ಮನೆಗೇ। ಮಂದಿರದಲ್ಲಿ ಪುಣ್ಯಾಹವು ಅಂದದಿ ಮಾಡಿ ಆ ದಿನವು ಹರುಷದಿ ಕೂಡಿ ಚಂದದಲಿ ಎಲ್ಲರು ಭುಂಜಿಸಿ ಕಣ್ಣಿಂದ ನೋಡಿ ಕುಶಲದೊಳಿದ್ದರು॥

ಹನ್ನೆರಡನೇ ದಿನವು ಭೂಸುರರೆಲ್ಲರ ಕರೆಸಿ ಧನ್ಯಳು ಪಡೆದ ಕೂಸಿಗೆ ನಾಮಕರಣವ ಘನದಿ ಮಾಡಿಸಿದರು। ತುಪ್ಪ ಭಕ್ಷ್ಯಗಳುಂಡ ವಿಪ್ರರು ಸಂಭ್ರಮಗೊಂಡು ತಪ್ಪದೆ ತಾಂಬೂಲ ಸಹಿತ ದೇಶಾವಾರ ತೊಕ್ಕೊಂಡು ಒಪ್ಪದಿಂದ ನಡೆದರು ಮನೆಗೆ। ಸೂತ್ರಧಾರಿ ಕೂಸಿಗೆ ರಾತ್ರಿ ತೊಟ್ಲಿಡಬೇಕೆನುತಾ ಅತಿಪುತ್ರವದನೆಯರು ಬಂದು ಪಾಡುತಲಿದ್ದರು ಪಾತ್ರಧಾರೀ ನರಸಿಂಹನ ನೆನೆಯುತ್ತಾ॥

**ರಾಗ:**

ಜೋ ಜೋ ಜೋ ಕಂದ ಹರಿವರದಿ ಬಂದಾ ಜೋ ಜೋ ಸಿರಿ ತಂದು ಕೊಡುವಳಾನಂದಾ।
ಪರಿ ಪರಿ ಚಿತ್ರ ಮಂಟಪವ ಸಿಂಗರಿಸೀ ಸರಸಿಜಾಕ್ಷಿಯರು ಸಂಭ್ರಮದಿ ಹರಸೀ।
ಪರಿಮಳ ಪುಷ್ಪವರಿಶಿನ ಕುಂಕುಮವಿರಿಸೀ ಹರುಷದಿಂದಲಿ ಗೋದಿ ಮಾಳ್ಯಗಳನಿಡಿಸೀ।
ಬೆಳ್ಳಿ ಸರಪಣಿ ಮೇಲೆ ವಿಸುನಿ ತೊಟ್ಲಿಟ್ಟೂ ಮಲಗಿಸಿ ತೂಗಿದರು ಪಾಡಿದರಷ್ಟು।
ಎಲ್ಲರಿಗರಿಶಿನ ಕುಂಕುಮವಿಟ್ಟೂ ವೀಳ್ಯದ ಪಟ್ಟಿಗಳ್ ಕುಶಲದಿ ಕೊಟ್ಟು।
ಹರಸಿ ಕೂಸಿಗೆ ಆಗ ಆರತಿ ಎತ್ತಿ ಭರದಿ ಮಂಗಳವ ಪಾಡಲು ಸ್ವರವೆತ್ತಿ।
ಬೂರಸಕ್ಕರೆ ಬೀರಿಸಲು ಬೀದಿಸುತ್ತೆ ನಾರಸಿಂಹನ ಪಾದಗಳೆರಡೊತ್ತೀ।

**ಕಂದ:**

ಹರಿವರದಿ ಬಂದ ಕೂಸಿಗೆ ಪರಿಪರಿಯಲಂಕಾರವ ಮಾಡಿ ಪ್ರತಿದಿನದಲ್ಲೂ ಹರುಷದಲಿದ್ದರು ಹರಿಗಾದಿನ ಹರಸಿಕೊಂಡ ಹರಕೆ ಮರೆತೂ। ಪುಷ್ಯಮಾಸ ಬರಲು ಹುಟ್ಟಿದ ಕೂಸಿಗೆ ಆಶ್ವಯುಜ ಮಾಸ ಬರಲು ಆ ಕಾಶ್ಯಪ ಗೋತ್ರಧಾರಿ ಶ್ರೀ ಶ್ರೀನಿವಾಸನು ವಿಶ್ವಾಸದಿ ತಂದು ಒಪ್ಪಿಸು ಎಂದ॥

**ವಚನ:**

ಇಂತಿರಲು ಆ ನಾರಿಗೆ ಸ್ವಪ್ನವಾಯ್ತುದೆಂತೆನೇ ।

**ರಾಗ:**

ಕನಸನ್ನು ನೆನೆಸಿಕೊಂಡಳೂ ಕಾಂತೆ ತಾನೆದ್ದು ಮನದಿ ಕಳವಳಗೊಂಡಳೂ।
ಘನಮಹಿಮಗೆ ತಾನು ತನಯನೊಪ್ಪಿಸದಿರೆ ಮನಸೀಜನಯ್ಯಗೆ ಮುನಿಸು ಬರುವುದು ಎಂದು।

ಆ ಮಧೂಕರವೇಣಿ ಆ ಮಂಜುವಾಣೀ ಆ ಮಾನುನೀಮಣೀ ಆ ಪದ್ಮಪಾಣೀ।
ಪ್ರೇಮವುಳ್ಳ ಹತ್ತು ಮಾಸದ ಕೂಸನೀಗಾ ಸ್ವಾಮಿಗೆ ನಾನು ಅರ್ಪಿಸುವುದೇಗೆ।
ಯಾವಾಗ ವೊಯ್ಯುನೋ ಯದುಕುಲಾಧೀಶ ಈವಾಗ ಎಷ್ಟು ಮಾಡಿದರೇನು ಕ್ಲೇಶ।
ಕೊಟ್ಟ ದೇವರು ಕಿತ್ತುಕೊಂಡೊಯ್ದು ವೇಳೆ ಕುಟ್ಟಿಕೊಂಡಿರಬಹುದೆ ಬರಿಯ ಜಾಲೆ।
ಇದ್ದಷ್ಟು ದಿನದೊಳಗೆ ಈ ಮಗುಲೀಲೆ ಮುಂದೆ ನಾನೆಲ್ಲಿ ನೋಡುವೆನೆಂದು ಬಾಲೆ।
ಕನಕ ನವರತ್ನಮಯವಾದವಷ್ಟಷ್ಟೂ ಮನಗೆ ಬೇಕಾದಷ್ಟು ಮಗನಿಗೇ ಇಟ್ಟು।
ದಿನ ದಿನಕೆ ಕೂಸು ಮಾಡುವ ಚರ್ಯವಷ್ಟೂ ಮನೆಯವರೆಲ್ಲಾ ನೋಡಿ ಸಂತೋಷ ಪಟ್ಟೂ।
ಈ ರೀತಿ ವಾಸರವು ಕಳೆಯುತಿರಲಾಗ ವರ್ಷವೈದಾಗಿ ಬಂತು ಕೂಸಿಗಾಗ।
ಮರೆತು ಹೋದಳಾಗ ಮಾಡಿದ ಹರಕೆ ಆಗ ತರಸಿ ತರಳಗೆ ಉದರ ಭಾದೆಂಬ ರೋಗ।
ಭರದಿ ಕೂಸು ಹೊರಳಿ ಹೊರಳಿ ಬಳಲುತಿರಲಾಗ ಅರಿತು ಕೂಸಿಗೆ ರೋಗವೇನ್ಬಂದಿತೆಂದೂ।
ಆವಾಗ ವೈದ್ಯರ ಬೇಗ ಕರೆತಂದೂ ಬೇಗದಿಂ ಕೈ ನೋಡಿ ನಾಡಿ ಇಲ್ಲವೆಂದು।
ಬಂದ ವೈದ್ಯರೆಲ್ಲ ಕೈ ಬಿಡಲಂದು ಶ್ರೀನಿವಾಸನೇ ನೀನೇ ಸಲಹೋ ಗತಿಯೆಂದೂ।
ಶೀಘ್ರದಿಂದ ತಂದು ಹರಕೆ ಕಟ್ಟಿದಳಂದೂ ಕನಕ ಕಶ್ಯಪ ವೈರಿ ಮನಸಿಗೆ ತಂದೂ।
ಕೂಸಿನ ಭಾದೆಯ ಹರಿಸೀದನಂದು॥
ಕೂಸು ತಾನೆದ್ದು ಕುಶಲದೊಳಾಡುತಿರುವಾಗ ಶಶಿವರ್ಧನೆಯು ನೋಡುತಾ।
ಹಸನಾದ ಕೂಸಿಗೆ ಬಿಸಿನೀರೆರೆದು ಬೇಗ ಬಿಸಿ ಅನ್ನ ಉಣಿಸಿದಳು।
ಮನೆಜನರೆಲ್ಲರು ಮಾಧವರಾಯಗೆ ಮುನ್ನ ಮಾಡಿದರಕೆಯಾ।
ನನುಮತದಿಂದಲಿ ಸಲಿಸಬೇಕೆನುತಲಿ ಕನಕಗಿರಿಗೆ ಹೊರಟರು।
ತಾತನು ಧಾರಣೆ ಪಾರಣೆ ಮಾಡುತ್ತಾ ಪ್ರೀತಿಯಿಂದಲಿ ನಡೆಯೇ।
ನೀತಿವಂತರೆಲ್ಲರು ಕೂಡಿ ಬೇಗದಿ ಖ್ಯಾತಿ ಬೆಟ್ಟವನೇರಲು।
ಬೆಟ್ಟವೇರಿ ಅವ್ವ ಭಾವಜನಯ್ಯಗೆ ಬಂಗಾರದ ತೊಟ್ಲೇಯಲೂ।
ತಟ್ಟನೇ ತಂದು ಸುವರ್ಣದ ಪ್ರತಿಮೆಯ ಸತಿ ಸಹಿತ ಕೊಟ್ಟರೂ।
ಮೂರುಮಂದಿ ಹರಕೆಗಳು ಮುಕುಂದಗೆ ಮುಟ್ಟಿಸ ಆ ದಿನವೂ।
ನಾರಿಯು ಪ್ರಾರ್ಥನೆಯ ಸಲ್ಲಿಸದಿರೆ ನರಸಿಂಹ ನಡೆಸುವ ಬಗೆ ನೋಡಿರಿ।
ಅಕ್ಷಯ ಕೋಟಿತೇಜ ಸಿರಿವಕ್ಷನೂ ಆ ಕ್ಷಣ ರಥವೇರಿದಾ।
ರಕ್ಷಿಪೆ ದಾಸರನೆನುತಲಿ ಲಕ್ಷ್ಮೀಪತಿ ಹೊರಟು ಬರುವ ಸಂಭ್ರಮದೊಳು ತಾ।
ಮನಸಿಜನಯ್ಯನು ಮಾನುನೀ ಮನದಲಿ ಮಾಡಿದ ಹರಕೆಯ।
ಬಿಡೆನೆನ್ನುತಾ ಘನದಿಂದ ಗೋಸಾಯ್ಮಠದೆಡೆ ಘನರಥ ತಡೆಮಾಡಿ ನಗುತ ನಲಿದಾಡುತಲೀ।
**ರಾಗ:**
ಬೈರಾಗಿ ಮಠದ ಬೀದಿಯಿಂದ ವೈಯ್ಯಾರವ್ಯಾಕೆ ಈ ವನಿತೆಗೆಂದಾ।
ಬೇಡಿದ ವರವ ನಾ ಕೊಡುವೆನೆಂದಾ ಆಡಿದ ಮಾತ ತಪ್ಪೆ ಬಿಡೆನೆಂದಾ।
ಇನ್ಯಾಕೆ ಸಂಶಯ ಬೇಡವೆಂದಾ ನಿನ್ನಾಣೆ ನರಸಿಂಹ ನಾ ಬಿಡೆನೆಂದಾ।

**ಕಂದ:**

ಬಿಟ್ಟಾನೆನ್ನುವ ಬಿಂಕವು ಕಟ್ಟಿರಿಸಿ ಎಷ್ಟುಮಾತ್ರವೂ ನಡೆಯದೆಂದು ಅಷ್ಟಮ ಸ್ತ್ರೀಯರ ಪುರುಷ ಕೃಷ್ಣನು ಹಠಮಾಡಿ ಅಲ್ಲೇ ನಿಂದಿರಲಂದೂ। ಇಂತು ಹರಿ ಪಂತವಿರುತಿರೇ ನಿಂದಿರುವ ಜನರೆಲ್ಲರೂ ಬಳಲಿ ತಾಪದಿಂದ ಸಂತಸದಿ ಸ್ತೋತ್ರ ಮಾಡುತ ತಂತಿಯ ಪಿಡಿದೆಳೆಯೆ ಬಾರ ಮಠ ಬಿಡೆ ಶೂರ। ಇಂತು ಭೂಕಾಂತನ ರಥ ಬಾರದೆ ನಿಂತಿರುವುದ ಕಂಡು ಭೂಸುರರೆಲ್ಲರೂ ಪೇಳ್ವರದೆಂತೆನೇ।

**ರಾಗ:**

ಸಾಗಿ ಬಾರೋ ಸಾಗಿ ಬಾರೋ ಸರಸಿಜೋದ್ಭವಯ್ಯಾ। ಸಾಗಿ ನೀನು ಬಾರದಿದ್ದರೇ ಸಲಹೂದಿನ್ಯಾರಯ್ಯಾ।

ಬಲ್ಲಿದ ಬಿಸಿಲೊಳಗೆ ಬಹಳ ಮಂದಿ ಜನರು ಬಳಲುವರು। ಕಲ್ಲು ಮನಸೆಂದು ನಿನ್ನ ಖಂಡಿತಾ ಆಡುವರು।

ಹಸನಾದ ಮಕ್ಕಳನು ಪಡೆದ ತಾಯಿಯರು ಹಸಿವು ತೃಷ್ಣೆಯಲಿ ಕೇಳ್ವರು ಹಾಗೆಂದು ಜನರು।

ಹೆಚ್ಚಿನ ಪ್ರಾರ್ಥನೆ ಮಾಡಿ ಯಾರೊಪ್ಪಿಸಲಿಲ್ಲವೋ।

ಅಜಭವಾದಿಗಳೆಂದು ಅಮರೇ ನನನುತನೋ ಭಜನೇ ಮಾಳ್ಪರ ಕಾಯ್ವ ಭಕ್ತ ವತ್ಸಲನೋ।

**ವಚನ:**

ಈ ರೀತಿಯಿಂದಲಿ ಭಕ್ತರೆಲ್ಲರೂ ಸ್ತುತಿಗೊಳಲು ನರಸಿಂಹ ಮೂರುತಿಯು ತಾನೇ ನಲಿದಾವೇಶದಲಿ ಪೇಳಲೂ।

**ಕಂದ:**

ಖತಿಯಿಂದಲಿ ಗೋವಿಂದನು ಅತಿ ವೇಗಾವೇಶದಿಂದ ಇಷ್ಟರಿಗೆಂದಾ। ಕ್ಷಿತಿಯೊಳಗೆ ಈಕೆ ಕಂದನ ರಥಗೊಪ್ಪಿಸುವೆನೆಂದಳೂ ಬೇಕೆಂದಾ। ಕಂದನು ಬಾರದೇ ರಥವನು ಮುಂದರಿಯೆನೆಂದೆನುತಾ ಮುಕುಂದನು ಪೇಳಲು। ನಿಂದಿಹ ವಿಪ್ರರೆಲ್ಲರೂ ನಿಂದಿಸಿ ಆಡುವರೆಂದು ಮಡದಿಯು ಕೇಳಲೂ।

**ರಾಗ:**

ಎಂಥ ಪ್ರಾರ್ಥನೆ ಮಾಡಿದೆ ಎಂದು ಎಲ್ಲರೂ ಕೂಗಾಡುವರಂದು।

ಕಾಂತಾಮಣಿ ಶ್ರೀಕಾಂತನ ಪಾದಕೆ ಕೂಸನು ತಂದೊಪ್ಪಿಸು ಎಂದು।

ಆಸೆಪಟ್ಟು ನೀ ಕೂಸನು ಬೇಡಿ ಆ ಸಮಯದಿ ನೀ ಮೋಸಹೋದೆಯಲ್ಲೇ।

ವಾಸುದೇವನಿಗೀಗ ಕೂಸನು ಕೊಡದಿರೆ ಶೇಷಶಾಯಿ ಎಂತು ಬಿಡೆನಲ್ಲೇ।

ವೀಸೆಗೆ ವೀಸ ಬಡ್ಡಿ ಕಟ್ಟಿಸಿ ಕಾಸು ಬಿಡದೆ ತರಿಸುವನಮ್ಮಾ।

ತ್ರಾಸಿನ ಹಾಗೆ ತಪ್ಪದೆ ನಡೆವ ಕೂಸನು ಬಿಡುವನೇನಮ್ಮಾ।

ಕುಂಟನು ತಂದಣ ವಿಪ್ರನು ಒಯ್ಯಲು ಕುಂಟನೆದ್ದು ಬಿದ್ದಟ್ಟು ತಂಟೆ ಮಾಡಿ ಬೀದಿ ಬೀದಿಯ ಸುತ್ತಿಸಿ।

ಆ ಗಂಟು ಸೇರಿತಾ ವೇಂಕಟೇಶನಿಗೆ।

ಮೂರು ಸೇರು ತುಪ್ಪವ ಮುದುಕಿ ತಾ ತಂದು ಎರಡು ಸೇರು ಹರಿಗಿತ್ತಳಂದು।

ಒಂದು ಸೇರು ತುಪ್ಪವ ತಾ ಮಿಗಿಸಿಕೊಂಡೊಯ್ಯಾಗ ಹಾರಿಸಿ ತಪ್ಪಲೆ ಬೋರ್ಲಿಸಿದಾತಗೆ।

ಬಾಲೆ ಕೇಳು ನಿನ್ನಿಂದ ಬಹಳ ಮಂದಿಗೆ ಕಷ್ಟ ಬಂದಿಹುದಮ್ಮಾ।

ಬಾಲಕನನು ನೀ ನರಸಿಂಹ ಮೂರುತಿಗೆ ವೇಗದಿ ತಂದೊಪ್ಪಿಸು ಎಂದೂ।

**ಕಂದ:** ಇಂತೆನ್ನುತ ವಿಪ್ರರೆಲ್ಲರೂ ನಿಂದಿಹ ಸತಿಗೆ ಹೇಳುವುದ ಕೇಳಿ ಚಿಂತಿಸುತತ್ತೇಮಾವರು ಕಾಂತಾಮಣಿಯ ಕುರಿತು ಪೇಳ್ವರಾವೇಳೆ। ಇದು ಏನ್ಹರಕೆ ಮಾಡಿದೆ। ಮದನನ ಸಮಾನವಾದ ಮಗನನು ಬಂಡಿಯ ಕೆಳಗೆ ಮುದದಿಂದೊಪ್ಪಿಸೆಂತು ಬಾಳುವೆ ಸದನವದೆಂತು ಸೇರುವೆ।

**ರಾಗ:**

ಕಂದನಿಗ್ ಹಾವಳಿ ತಂದೆ ನೀನೆಂದು। ಎಂದು ಇಲ್ಲದ ಹರಕೆ ಇಂದು ಕಂಡೇವೆಂದು।

ಸಿರಿಪತಿ ಹರಕೆಯು ಬರಿದ್ಯಾಗುವುದುಂಟೆ। ಪರಿ ಪರಿ ಹರಕೆ ಉಂಟು। ಪ್ರಾಣಕೆ ತಂದವರುಂಟೆ।

ಎತ್ತಬಾರದ ಕಲ್ಲು ನಿತ್ತಿಲಿ ಬಿದ್ದಂತೆ ಎತ್ತಲಾದರು ಹೀಗೆ ಮೃತ್ಯು ಬೇಡುವರುಂಟೆ।

ಹಾವಿನ ಹುತ್ತದಿ ಹಸ್ತ ಇಡುವರುಂಟೆ ದೇವ ನೃಸಿಂಹನೇ ಬಿಡಿಸ ಬೇಕು ಈ ತಂಟೆ।

**ಕಂದ:**

ಇಂತೆನುತ ಮೂರುಮಂದಿಯೂ ಕಂದನ ಮುಖ ನೋಡಿ ಕಳವಳ ಗೂಡಿ। ಚಂದಿರಮುಖಿ ಬಂಡಿಯ ಕೆಳಗೆ ಹ್ಯಾಗೆ ಹಾಕುವಳೋ ಎಂದು ಎಲ್ಲರೂ ಆಡಲು। ಅತ್ತೆಮಾವ ಪತಿಯು ತತ್ತರಿಸುತ್ತಿರಲು। ಹತ್ತಿರದಲ್ಲೇ ಇರುವ ಸೊಸೆಯು ಅವರಂ ನೋಡಿ। ಎತ್ತ ಹೋಗಲೋ ಸ್ವಾಮಿ ಎನಗೇನು ಗತಿ ಎಂದು ಚಿತ್ತಜಪಿತನಿಗೆ ಮೊರೆಯಿಡುವಳಂದು।

**ರಾಗ:**

ಇಂದೆನ್ನ ಬಯಲು ಮಾಡಿ ಇಂದಿರೇಶ ಕಂದನ್ನ ಕೊಂಡೊಯ್ವೆಯಾ। ತಂದೆ ನಾನ್ ಹ್ಯಾಗಿರಲೋ ತನುವೆತ್ತಿ ಧರೆಯೊಳು।

ಮಂದಿಯರೊಳಗೆಲ್ಲ ಮಾತಿಗೆ ಸಿಲುಕಿಸಿ। ಶ್ರೀಶ ತಾಳಲಾರೆ ಶ್ರೀಧರವತ್ಸ ಕೂಸನೊಪ್ಪಿಸಲಾರೆ।

ಆಸೆ ಪಟ್ಟು ಆಗ ಹರಕೆ ಹರಸಿ ಕೊಂಡೆ। ಕೂಸನೊಯ್ದು ಈಗ ಘಾಸಿಮಾಡುವರೇನೋ।

ಮರೆತಾಗ ಬೇಡಿಕೊಂಡೆ ಮಾಧವ ಈಗ ಕರ ಮುಗಿದು ಕೇಳಿಕೊಂಬೆ।

ಕರದೊಳಗೀಗೆನ್ನ ಕೂಸು ಇಲ್ಲದೆ ನಾನು ಭರದಿಂದ ಮನೆಗೆ ಬಾಳಿ ಹೋಗಲಾರೆ।

ನೀನೇ ವರವ ಕೊಟ್ಟೆ। ನಿಗಮ ವೇದ ಹರಿ। ಪ್ರಾಣವೂ ನಿನ್ನದಯ್ಯಾ।

ಮಾನವರೊಳಗೆನ್ನ ಮಾನ ಕಳೆಯಬೇಡ। ಪ್ರಾಣರಕ್ಷಕ ಎನ್ನ ಮಾನ ಉದ್ದರಿಸಯ್ಯಾ।

ಎತ್ತ ನೋಡಲೂ ಜನರು ರಘುಪತಿ ಎನ್ನ ಅತ್ತೆ ಮಾವ ಪತಿಯು।

ಪುತ್ರಗೆ ಈಗ ಮೃತ್ಯುದೇವತೆ ಎಂದು ಕ್ಷುದ್ರ ಮಾತುಗಳಿಂದ ಕುತ್ತಿಗೆ ಕತ್ತರಿಸುವರೋ।

ದಾಸ ರಕ್ಷಕನಾದ ಶ್ರೀ ನರಹರಿ ಮೂರುತಿ। ಕೂಸೆನಗಿತ್ತು ಕಾಯೋ।

ವಾಸುದೇವ ನಿನ್ನ ವಾಸಿ ಮರೆಯಬೇಡ। ಸಾಸಿರ ವದನದಿ ವಾಸುಕಿ ಪೊಗಳುವೆ।

**ರಾಗ:**

ನಂದ ನಂದನ ಸ್ತುತಿಸಿ ನಾರೀತಾನಂದೂ। ಕುಂದಿ ಕಂದಿ ಕಂದನ ನೋಡಿ ಕಣ್ಣೀರು ತಂದು।

ಮಂದರೋದ್ಧಾರಗೆ ಮಗುಕೊಡುವುದು ಕಂಡು ನೊಂದವೇ ಮನಸು ಬಲು ಪಿತಾನೆಂದು।

ಇನ್ನ್ಯಾಕೆ ಧರಿಸಿರಲಿ ಈ ತನುವನೆಂದು। ಸಂದೇಹ ಮಾಡುತಿರೆ।

ಸತಿಗೆ ಸುತನೆಂದಾ। ಕುಂದದೇ ನಿಂದಲ್ಲಿ ಕೇಳುವನು ಕಂದನರಿತೂ।

**ರಾಗ:**

ಯಾಕಮ್ಮಾ ನಿನಗೀಗ ಚಿಂತೆ ಸಾಕು ಪೇಳಮ್ಮಾ। ಲೋಕಪತಿ ಯಾಕಿಲ್ಲಿಗೆ ಸಾಗಿ ಬಾರನೇ।

ಮಗನೇ ನಾ ನಿನಗೇನ ಪೇಳ್ವೆ ಹಗರಣದಾ ಮಾತು। ಜಗದೊಡೆಯಗೆ ಕೊಡಬೇಕಂತೆ ಮಗುವೇ ನಾ ನಿನ್ನ।

ಕಂತುಪಿತನಿಗೆ ಕೊಡಬೇಕಂತ ಕಾರಣವೇನಮ್ಮಾ। ಅಂತರಂಗದಿ ಅಪಾರವಾದ ಚಿಂತೆ ಯಾಕಮ್ಮಾ।

ಬೇಕಂತಾ ನಾ ಬೇಡಿಕೊಂಡೆ ಬೆಟ್ಟದೊಡೆಯಗೇ। ಸುಖವ ಹೀಗೆ ತಂದುಕೊಂಡೆ ಸುಮ್ಮನಿರದಾಗೇ।

ಹರಿಗೆ ಎನ್ನ ಕೊಡಬೇಕಂತ ಹರಕೆ ಯಾಕಮ್ಮಾ। ಸರಸೀಜಾಕ್ಷಗೆ ಎನ್ನ ಕೊಂಬೋ ಕಾರಣವೇನಮ್ಮಾ।

ಕೂಸುಗಳ ಪೆತ್ತವರೆನ್ನ ಎತ್ತಿ ಆಡಿದರು। ಬೇಸರದಿಂದ ಆಗ ನಾನು ಬೇಡಿಕೊಂಡೆನು।

ಕುಂಬಿನೀಪತಿ ಕೊಡು ಎಂದರೆ ಕೊಡಬಾರದೇಕೆ। ಜಂಬಧಾರಿಗೆನ್ನನು ಸೇರಿಸು ಜಾಗು ಮಾಡದೆ।

ಮಗನ ಬಂಡಿ ಕೆಳಗ್ ಹಾಕೆಂದು ಮಂದಿ ಕೈಯಿಂದ। ಬಗೆ ಬಗೆ ಮಾತುಗಳಿಂದ ಬಣ್ಣಗೆಡೆಸುವರೋ।

ಅಮ್ಮಯ್ಯಾ ನಿನಗೇನು ಕ್ಲೇಶ ನನ್ನಲ್ಲಿ ಪೇಳೇ। ಚಲ್ವ ಪನ್ನಗಶಾಯಿ ನಿಲ್ಲಿಸನ್ಯಾಕೆ।

ನನಗೆ ನಾನೇ ಮಾಡಿಕೊಂಡೆ ನಾನೇ ಪಾಪಿಯೂ। ನಿನಗೋಸ್ಕರ ಬೇಡಿಕೊಂಡೆ ನಿಗಮ ಗೋಚರನಾ।

ಇನ್ಯಾಕಳುವಿ ನನ್ನಂಥಾ ಮಗ ಇನ್ನೂ ಆಗುವನು। ಚನ್ನಕೇಶವನಂಘ್ರಿಕಮಲ ಸಿಕ್ಕುವುದದರಿಂದ।

ಕಂದಯ್ಯಾ ನಿನ್ನ ಬಿಟ್ ಹ್ಯಾಗಿರಲೋ ಕೊರಗುತ್ತಾ ನಾನೂ। ಮಂದಿಯೊಳಗೆ ಮಾನವಿಲ್ಲದ ಮಾತಿಗೆ ಗುರಿಯಾಗಿ।

ಭವರೋಗ ವೈದ್ಯನ ಸೇವೆ ದೊರಕೀತಮ್ಮಯ್ಯಾ। ಶ್ರೀನುತ ಶ್ರೀ ನರಸಿಂಹನ ಪಾದ ಸೇರಿಸಮ್ಮಯ್ಯಾ।

**ಯಾಲಪದ:**

ಎಷ್ಟು ಧನ್ಯನಾದೆನಮ್ಮಾ। ಎಷ್ಟು ಜನ್ಮದ ಪುಣ್ಯವಮ್ಮಾ।

ಅಷ್ಟು ಬಂದೊದಗೀತಮ್ಮಯ್ಯಾ। ಅಪಾರಮಹಿಮ ಶ್ರೀಕೃಷ್ಣನ ಪಾದ ದೊರಕೀತಮ್ಮಯ್ಯಾ।

ಮನುಜಲೋಕದಿ ಪುಟ್ಟಿದ ಮನುಜರಿಗೆ ಮರಣ ಸಿದ್ಧ।

ಏಳು ಲೋಕದಿ ಜನಿಸಲು ಜನನ ಮರಣವಿದು ಎಂದಿಗಿಲ್ಲ ಕೇಳು ದಿವಿಯೊಳು ಪುನಃ।

ಈ ಪರಿಯಿಂದಲಿ ಎಷ್ಟು ಭೂವರರು ಕೆಟ್ಟು ಹೋದರೇ।

ಶ್ರೀಪತಿ ಪಾದ ದೊರಕುವುದಷ್ಟು ತಾಪಸ ಬಿಟ್ಟು। ನಿಗಮಾಗಮ ಪತಿಗರ್ಪಿಸು ಮನವಿಟ್ಟು।

**ಸೀಸಪದ:**

ಕಂದನಾಡಿದ ಮಾತು ಕಾಂತೆಯು ತಾ ಕೇಳಿ ಕಣ್ಗಳೆರಡರೊಳಗೆ ಕಂಬನಿಯ ತಾಳೀ।

ಅಪ್ಪ ಬಾರೋ ಎಂದು ಮಗನ ತಾನಪ್ಪಿ ಅಪ್ರಮೇಯನ ಮುಂದೆ ಬಂದು ನಿಂತು।

ಭಕ್ತಿ ಹಾಸಿಗೆ ಹಾಸಿ ಬಂಡಿ ಮುಂದಾಗ ಬಾಲಕನ ಮಲಗಿಸಿ ಭಾಮೆ ತಾನು।

ಮುಕ್ತಿದಾಯಕ ನಿನಗೆ ಹರಕೆ ಮುಟ್ಟಿತೆ ಎನಲು। ಮೂರು ಮಂದಿ ನೋಡಿ ಮೂರ್ಚೆಗೊಳ್ಳಲು।

ತರುಣಿ ತಾನು ಮಲಗೆ ತನಯಗೆ ಸರಿಯಾಗಿ। ಹರಿಗೆ ಕರವ ಮುಗಿದು ಆರ್ತಳಾಗಿ।

ನಳಿನನೇತ್ರೆಯು ನರಸಿಂಹ ಮೂರ್ತಿಗೆ ಸ್ತುತಿಯ ಮಾಡಿದಳಾಗ ಸತಿಯು ಬೇಗ।

**ರಾಗ:**

ಇಂದಿರೇಶ ಪಾಲಿಸೆಂದು ಇಂದು ಸಾರಿದೆ। ಇಂದು ಬಂದು ಬೇಡಿದೆ।

ದಾನಿಗಳಸ ದೀನರಲ್ಲಿ ಬಹಳ ಕ್ರೋಧವ ನೀನು। ಮಾಡಿ ಕಾಡುವೆ।

ಅಂಗನೆಗೆ ಮಗನ ಕೊಟ್ಟು ಭಂಗಪಡಿಸುವೆ। ಕೃಪಾಂಗನೆನಿಸುವೆ।

ಶ್ರೀಶ ನೀ ಕೂಸನೊಯ್ದು ಅಭಾಸನಾಗುವೆ। ಶ್ರೀನಿವಾಸನಾಗುವೆ।

ಸತ್ತ ಮಗನ ಬದುಕಿಸಿತ್ತ ಶಕ್ತನಲ್ಲವೇ। ಈಗ ಅಶಕ್ತನಲ್ಲವೇ।

ಸಂರಕ್ಷಕನೆಂಬ ಮೊರೆಯ ಸ್ಮರಿಸಿಕೊಂಬುವೆ। ಇಲ್ಲಿ ಮರೆಸಿಕೊಂಬುವೆ।

ನಾಗಶಯನ ನರಸಿಂಹ ಎಂದು ನುಡಿದೆ। ಈಗ ಕಂದನ ಕಾಡುವೆ।

**ರಾಗ:**

ಇಂದು ಶ್ರೀಪತಿ ಎನ್ನ ಕಂದ ರತ್ನವ ತಂದು ಇಂದು ನಿನಗೊಪ್ಪಿಸಿದೇ। ಮುಂದ್ಯಾರೂ ಗತಿಕಾಣೆ ಮುದ್ದು ಕಂದಯ್ಯಗೆ।

ತಂದೆ ಕಾಯೋ ನೀನೇ ತರಳಾಕ್ಷನೆನಿಸೋ।

ಬಾಳ ದಿನಕೆ ಒಬ್ಬ ಬಾಲಕನನು ಕೊಟ್ಟು ಬಾಲಲೀಲೆಯ ತೋರಿಸೀ।

ಬಾಲಕನ ಬೇಗ ಬಂಡಿಕೆಳಗಾಕೆಂದು ಬಹಳ ಹಠವ ಮಾಡಿ। ಬಾಲಕನಪಹರಿಸುವೆಯಾ।

ಕೂಸನೊಪ್ಪಿಸದಿರೆ ವಾಸುಕಿ ತನುಭವ ಕ್ಲೇಶನಾಶ ಕಲ್ಮಷಹರಾ।

ಕೂಸು ಗಾತ್ರದಿ ಬಂಡಿ ಲೇಸಾಗಿ ನಡೆಸಯ್ಯಾ। ದಾಸ ರಕ್ಷಕನೆನಿಸೋ।

ಹರಿಹರಬ್ರಹ್ಮ ಮೊದಲಾಗಿರುವೋ ಎಂಬತ್ತೊಂಬ್ಬತ್ತು ನಾಲ್ಕು ಲಕ್ಷ ಜೀವಿಗಳಿಗೆಲ್ಲಾ ನೀನೇ।

ನಿರುತ ನೀ ರಕ್ಷಿಪೆ ನರಸಿಂಹ ಮೂರುತಿ। ಹರಸಿ ಪಾಲಿಸು ಈಗ ಹಸಿಕೂಸನು ಬೇಗ।

**ಕಂದ:**

ಮಡದಿಯು ಪ್ರಾರ್ಥಿಸುತಿರೆ ಭೂ ಒಡೆಯರು ಬಹಳ ಕೋಪವ ಮಾಡಿದ ಪರಿಯೊಳು। ತಡೆಯದೆ ರಥವ ಹಿಂದೋಡಿಸಿ ಮುಂದಕೆ ಜನರೆಲ್ಲಾ ನೋಡುತಿರಲಾಗ।

**ರಾಗ:**

ಧಡ ಧಡ ರಥವ ನಡೆಸಿದಾ। ದೈತ್ಯಾಂತಕ ಹರಿ ಬೆಡಗು ಮಹಿಮೆಯ ತೋರಿದಾ।

ಕಡುವೇಗದಿಂದ ಕಂದನ ಪಡೆದವಳಿಬ್ಬರಮೇಲೆ।

ಸಡಗರದಿಂದ **<u>ಹಾರಿಸಿ</u>** ಪೊಡವೀ ಮೇಲ್ ಮುಂದಕೆ ಓಡಿಸಿ॥ ॥ ಧಡ ಧಡ ॥

ಅಂಗನೇ ಮಗನ ಮೇಲನಂಗವಾರಿಯ ಪರಿಯಲಿ।

ರಥವ ನಡೆಸುತ್ತ ಹೊರಟನು ರಾಜೀವನೇತ್ರನೂ॥ ॥ ಧಡ ಧಡ ॥

ಸತಿಗೆ ಸಂಭ್ರಮವಿತ್ತನೂ । ಹಠಮಾಡದೆಲೆ ಸುತನ ಹಿತದಿಂದ ಸತಿಗಿತ್ತು।

ಅತಿ ಖ್ಯಾತಿ ತಂದ ಚಂದ ಕ್ಷಿತಿಮೇಲಾನಂದದಿಂದ॥ ॥ ಧಡ ಧಡ ॥

ಭೇರಿಗಳ ಝೇಂಕಾರವೂ ಮೀರಿದ ತಂಬೂರಿ ತಾಳ।

ಜಾಲರು ಸಹಿತ ಸೇರಿಸಿದ ಮದ್ದಳೆ ವಾದ್ಯದಿ। ಸಾರಶಂಭೂರಿ ಕುಣಿತ।

ಸರಸದಿಂದ ತೇರನೋಡಿಸಿದ। ಸಂಭ್ರಮದಿಂದ ರಥವ ನೆಲೆಯಲ್ಲಿ ನಿಲ್ಲಿಸಿದಾ।। ॥ ಧಡ ಧಡ ॥

ನರಸಿಂಹ ಮೂರುತಿಯು । ನಂಬಿದ ಜನರಿಗೆಲ್ಲಾ ಮರೆಯದೆ ತಾ ಪೊರೆವೆನೆಂದು ಪರಮ ಸಂಭ್ರಮದಿಂದ॥ ॥ ಧಡ ಧಡ ॥

**ಕಂದ:**

ಬಲ್ಲಿದ ರಥವು ನೆಲೆಯಲ್ಲಿ ನಿಲ್ಲಲು। ಇಲ್ಲಿದ್ದ ಸತಿಯು ಸುತನಂ ನೋಡಿ ಪುಲ್ಲಾಬ್ಜನು ಪೂರ್ಣಕರುಣದಿ ಉಲ್ಲಾಸದಿ ಉಳಿಸಿದನೆಂದು ಮಗಬಾರೆಂದೂ।

**ರಾಗ:**

ಬಾರೋ ಕಂದ ಎನ್ನ ಭಾಗ್ಯದ ನಿಧಿ ಎಂದು ಬಾಚಿ ತಬ್ಬಿದಳು ಮಗನಾ।

ಮುರಾರಿ ಸಲಹಿದ ಮುದ್ದು ಮಗನೇ ನಿನ್ನ ಎಂದು ವಾರಿಜಮುಖಿ ವೈಭವದಿಂದಾ।

ಅರಿಯದೆ ನಾನಿಂಥ ಹರಕೆ ಹರಸಿಕೊಂಡು ಘನರಥಗೊಪ್ಪಿಸಿದೇ।

ಮನ್ನಿಸಿ ಮಾಧವ ಮಗನ ಕೊಂಡೊಯ್ವಂತ ಅನ್ಯಾಯ ಮಾಡಿದ ಎನ್ನ ನೋಡಲಿಕ್ಕೇ।
ಆಪದೋದ್ಧಾರಕ ಹರಿಯನ್ನು ಕುರಿತು ಈ ಪರಿ ಬೇಡಲುಂಟೇ।
ಪಾಪಹಾರಕ ಸ್ವಾಮಿ ಪ್ರಾಣವ ಉಳಿಸಿದ। ಪಾಪ ಮಾಡಿದವನ್ನ ನೀ ಪಾಲಿಸೋ।
ನರಸಿಂಹನ ವರದಿಂದ ನಾರಿ ಜಠರದಿ ಜನಿಸಿ ಚಿರಾಯುವಾದ ಚಿನ್ನಾ।
ಪರದೇಶಿ ಎನಿಸದೆ ಪರಮ ಪಾಪಿಷ್ಟೆಯ ಕರದೊಳಗೆ ನಿಂತು ಕಣ್ಣಿಂದ ನೋಡೋಕೇ।

**ಕಂದ:**

ಕಂದ ಬಾರೆನ್ನುತ್ತಾ। ಕೆಂದೂಳಿ ಮೈಕೈಯ ಮೈತುಂಬಾ ಒರೆಸುತ್ತಾ। ಆನಂದಾಬ್ಧಿಯೊಳಾಡುತ್ತಾ। ಸಂದೇಹವನಳಿದ। ಸತಿಯು ಸುತನಂ ನೋಡುತ। ಚಿಂತೆಯ ಬಿಟ್ಟು ಸತಿಯು ಸಂತಸದಿಂದಿರಲು। ಕಂತುಪಿತನ ರಥವು ಬಂದು ನಿಂದ ಮೇಲೆ ಬಹಳ ಜನರು ಬಾಲನಿದ್ದೆಡೆಗೆ ಬಂದು ಆನಂದದಿಂದ ಸುತನ ಹರಸಿದರೂ।

**ರಾಗ:**

ಹರಸೀದರೂ ಕಂದನಾ। ಹರಿ ಕೊಟ್ಟ ಮಗನ। ಹರಸೀದರೂ ಕಂದನಾ।
ನಾರೀಯರೆಲ್ಲ ಬಂದು ನಾರೀ ಕೂಸನು ಕಂಡು ತಾರೇ ತಾರಮ್ಮ ಎಂದು ತರಳನ್ನ ಎತ್ತಿಕೊಂಡು।
ವರವಿಪ್ರರೆಲ್ಲ ಬಂದು ವರಪುತ್ರನಂ ನೋಡಿ ತಾರೇ ತಾರಮ್ಮ ಎಂದು ತರಳನ್ನ ಎತ್ತಿಕೊಂಡು।
ಹರಿದಾಸರೆಲ್ಲ ಬಂದು ನರಸಿಂಹನ ಕೂಸೆಂದು ತಾರೇ ತಾರಮ್ಮ ಎಂದು ತರಳನ್ನ ಎತ್ತಿಕೊಂಡು।
ಹರಸೀದರೂ ಕಂದನಾ। ಹರಿ ಕೊಟ್ಟ ಮಗನ। ಹರಸೀದರೂ ಕಂದನಾ।

**ಕಂದ:**

ಅತಿ ಸಂಭ್ರಮದಿಂದಿರುತ ಸತಿ। ಪತಿ ಅತ್ತೆ ಮಾವರ ಬಳಿಗೆ ಬೇಗ ಬಂದು। ಮತಿವಂತಳು ಸುತನಿಗೆಂದಳು। ಚತುರನೆ ಪಿತ ತಾತ ಅವ್ವರ ಎಬ್ಬಿಸು ಎಂದಳು। ಅಂದ ಮಾತ ಕೇಳಿ ಆ ಕಂದನಾಗ ತಾತಪ್ಪವ್ವರು ತನಯನ ನೋಡಿ ಏಳಿರೆಂದು ನುಡಿಯಲು। ನಿದ್ರೆ ತಿಳಿದವರಂತೆ ಮೂವರೂ ಎದ್ದರು।

**ರಾಗ:**

ತಾತಪ್ಪವ್ವರು ತನಯನ ನೋಡಿ ಸಂತೋಷದಿ ತಾವೆಲ್ಲರೂ ಕೂಡಿ ಪ್ರೀತಿಲಿ ಕಂದನ ಎತ್ತಿ ಮುದ್ದಾಡಿ ಪ್ರೇಮದಿಂದ ಹರಕೆಯ ಹರಸಿ ಪಾಡೀ। ಅತಿಬೇಗ ವಂದಿಸಿ ಹರಿಗಾವಾಗ। ಐವರು ಬಂದರು ಮನೆಗಾಗ।
ಮತಿವಂತರು ವಿಪ್ರರ ಸಹಿತಾಗಿ ಮೃಷ್ಟಾನ್ನ ಉಂಡರು ಬಲುಬೇಗ।
ತೀರ್ಥ ಆಗೋ ಪರ್ಯಂತ ಇದ್ದು ಸೇವೆಗಳನ್ನೆಲ್ಲಾ ನಡೆಸಿದರು।
ಆರ್ತಿಯಿಂದ ಹರಿಗೆ ವಂದಿಸಿ ಹೊರಟರು ಭಾಗಾನಗರದ ಸೀಮೆಗೆ॥

**ಕಂದ:**

ಹರಿಯಾತ್ರೆ ಮಾಡಿ। ಹರಿ ಹರಕೆ ಸಲ್ಲಿಸಿ ಮನೆಗೆ ಹರುಷದಿ ಬಂದರು ಹರಿಭಕ್ತರಾಗ। ವಿಪ್ರರಿಗೆ ಹರಿದಾಸರು ಐವರು ವಂದಿಸಲು। ಭೂಸುರರೆಲ್ಲರೂ ಕೂಸಿಗೆ ಆಶೀರ್ವಚನವ ಮಾಡಿ ಹರುಷದಿಂದೆತ್ತಿ ಮುದ್ದಾಡಿ। ಸಂತೋಷದಿ ತಾಂಬೂಲ ದಕ್ಷಿಣೆ ವಿಪ್ರರು ತೆಗೆದುಕೊಂಡು ಹೋದರು ಮನೆಗೇ।

**ವಚನ:** ಈ ರೀತಿಯಿಂದಲಿ ವಿಪ್ರರೆಲ್ಲರೂ ಮನೆಗೆ ಹೋಗಲು ಆ ರಾತ್ರಿನೆಡೆಸುವ ಬಗೆ ಅದೆಂತೇನೇ।

**ರಾಗ:**

ಮಂದಿರದಲಿ ರಾತ್ರಿ ಮಾರಜನಯ್ಯನ ಪೂಜೆ ಮಂಗಳಾರತಿಯ ಮಾಡಿ।

ಬಂಧು ಬಳಗ ಜನ ಸಹಿತ ಕೂಡಿ ಬೇಗ ಬೇಗ ಭೋಜನವ ಮಾಡಿ।
ಗಂಧಗಳ ಪೂಸಿ। ಕುಂದ ಪುಷ್ಪವ ಧರಿಸಿ। ತಾಂಬೂಲವಾಚರಿಸಿ।
ಬಂಧುಗಳಿಗೂ ತಮಗೂ ಬೇರೆ ಬೇರೆ ಹಾಸಿ ಮಲಗಿದರು ಮುದವಿರಿಸಿ।
ಮರುದಿನ ಉದಯ ಮಾರಮಣನ ನೆನೆದು। ಮತಿವಂತರೆಲ್ಲರೆದ್ದು।
ಭರದಿ ಸ್ನಾನವ ಮಾಡಿ। ಭಕ್ತವತ್ಸಲನಾದ ಭಗವಂತನ ನೆನೆಯುತ್ತಾ॥

**ವಚನ:**

ಈ ಪ್ರಕಾರ ನಡೆಸಿದ ಸ್ವಪ್ರಕಾಶನಾದ ಅಪ್ರಮೇಯನಿಗೆ ಕ್ಷಿಪ್ರದಿಂದ ಸಮಾರಾಧನೆ ಮಾಡುವರದೆಂತೆನೇ।

**ದ್ವಿಪದ:**

ಶ್ರೀ ವೇಂಕಟೇಶನ ಸಂತರ್ಪಣೆ ದಿನವು। ಪೋಗಿ ಮನೆ ಮನೆಗಳಿಗಂದು।
ಬ್ರಾಹ್ಮಣ ಮುತ್ತೈದೇರಿಗೆಲ್ಲಾ ಭೋಜನಕೆ ಹೇಳಿ ಬಂದು। ಮನೆಗೆ ಬೇಗ।
ಅತಿಶಯದ ಪಾಕಗಳ ಮಾಡಿ। ಅತಿ ಭಕ್ತಿಯಿಂದಲಿ ಹರಿಗೆ ಅರ್ಪಿಸಿದರಾಗ।
ವಿಪ್ರರೆಲ್ಲರು ಬಂದು ಕ್ಷಿಪ್ರದಲಿ ಉಂಡು। ತಾಂಬೂಲ ದಕ್ಷಿಣೆ ತೊಕ್ಕೊಂಡು।
ಮಂತ್ರಾಕ್ಷತೆ ಕೊಟ್ಟು ಮನೆಗೆ ಹೊರಟರಷ್ಟು। ಆ ಬಳಿಕ ಮನೆಯವರೆಲ್ಲ।
ಭೋಜನವ ಮಾಡಿ। ಆ ಮಹಾಮಹಿಮನ ಕಥೆಯ ಅನುದಿನ ಶ್ರವಣ ಮಾಡಿ।
ಅತಿಥಿಗಳ ಪೂಜೆ ಮಾಡಿ। ಅತಿ ಹರುಷದಿಂದಿದ್ದರು ಐವರು ಕೂಡಿ।

ಈ ಮಹಾಮಹಿಮನ ಕಥೆಯ ಈ ಜಗದೊಳಗೆ ಯಾರು ಕೇಳಿದರೂ ಯಾರು ಪೇಳಿದರೂ। ಭಾವಜನಯ್ಯನು ಒಲಿದು ಕರುಣಿಸುವಾ। ಪಾಲಿಸುವಾ। ಸಂರಕ್ಷಿಸುವಾ।।

ಪುತ್ರ ಸಂತಾನವನು। ಪೂರ್ಣ ಭಾಗ್ಯವನು। ಛತ್ರ ಚಾಮರ ಅಳವಟ್ಟ ಸೌಖ್ಯವನು। ನಿತ್ಯ ಕಲ್ಯಾಣವನು। ನಿತ್ಯೋತ್ಸವಗಳನು। ಆರ್ತಿಯಿಂದಲಿ ಈ ವರ್ಗಗಳ ಕಾಯ್ವ॥

ಬಂಜೆತನವುಳ್ಳ ಭಾಮೆಯರಿಗೆಲ್ಲಾ ಸಂಜೀವನವು ಕೇಳಿ ಈ ಕಥೆ ಸೊಲ್ಲಾ। ಬಂಜೆತನವು ಜರಿದು ಬಾಲಕರ ಪಡೆದು। ಕಂಜಾಕ್ಷಿಯರು ಕುಶಲದಿಂದಿರುವರು। ಕಂಜನಾಭ ನರಸಿಂಹನ ಕೃಪೆಯಿಂದಾ॥

**ಜಯ ಮಂಗಳಾ। ನಿತ್ಯ ಶುಭ ಮಂಗಳಾ॥**

ಮಂಗಳಂ ಸ್ತಂಭಡಿಂಬಾಯ ಮಂಗಳಂ ಮೃತ್ಯು ಮೃತ್ಯುವೇ। ಮಂಗಳಂ ರೌದ್ರರೂಪಾಯ ಶ್ರೀ ನೃಸಿಂಹಾಯ ಮಂಗಳಂ॥

ಪ್ರಹ್ಲಾದನುತ ಸಿಂಹವದನ ಶ್ರೀಹರಿಯೆ
ಆಹ್ಲಾದದಿಂಸ್ತುತಿಪೆ ವರವೀವ ನರಹರಿಗೆ
ಕರೆದೊಡನೆ ಸ್ತಂಭದಿಂದೊಡೆದು ಬಂದಾ ಹರಿಗೆ
ಸ್ಮರಣೆ ಮಾತ್ರದಿ ಸಕಲ ಸಿದ್ಧಿಯನು ಕೊಡುವವಗೆ
ಮಂಗಳವು ಶ್ರೀಹರಿಗೆ ಶುಭಮಂಗಳಾ
ಮಂಗಳವು ನರಹರಿಗೆ ಜಯಮಂಗಳಾ॥

★ ★ ★ ★ ★